ಹುಡುಗಿಯ ಬೈತಲೆಯಂತೆ ತೋರಿ ಪುಳಕಗೊಂಡ. ರಸ್ತೆ ಬದಿಯ ಹೊಲಗಳು ಹಸಿರು ಮುಕ್ಕಳಿಸತೊಡಗಿದ್ದವು. ಆಳೆತ್ತರ ಬೆಳೆದ ಜೋಳದ ಹೊಲದ ಸೌಂದರ್ಯವನ್ನು ತುಸು ಹೊತ್ತು ನಿಂತೇ ಸವಿಯಬೇಕು. ಚಿತ್ತ ಚಂಚಲಗೊಳಿಸುವ ತೆಳುವಾದ ಸುಂದರಿಯೊಬ್ಬಳು ಹಸಿರು ಪತ್ತಲ ಧರಿಸಿದಂತೆ ಕಾಣುವ ಜೋಳದ ದಂಟುಗಳು ಮನ ಸೆಳೆಯದೇ ಬಿಡಲಾರವು. ಇಡೀ ಜೋಳದ ಹೊಲ ತೆಳುವಾದ ಸುಂದರಿಯರ ಸಮಾವೇಶದಂತೆ ತೋರಿ ಯಮನೂರಪ್ಪ ರೋಮಾಂಚನಗೊಂಡ. ಜೋಳದ ಹೊಲ ಕಣ್ತುಂಬಿಕೊಂಡು ಮುಂದೆ ಸಾಗಿದಂತೆ ಸೂರ್ಯಕಾಂತಿಯ ಹೊಲ ಬಂತು. ಆ ಸೂರ್ಯಕಾಂತಿ ನೋಡುತ್ತಲೇ ಅರಿಸಿನ ಗಲ್ಲದ ಸಿನಿಮಾ ನಟಿಯರು ನೆನಪಾದರು. ಯಮನೂರಪ್ಪ ಲಹರಿಗೆ ಬಿದ್ದ. ಹಿಂದಿ ಸಿನಿಮಾದ ಹಾಡೊಂದನ್ನು ಸಿಳ್ಳೆಯಲ್ಲಿ ಗುಣಗುಣಿಸುತ್ತಾ ಸವಾರಿ ಬೆಳೆಸಿದ. ಆಗಲೇ ಯಮನೂರು, ಬೆಣ್ಣೆಹಳ್ಳ ದಾಟಿ ನವಲಗುಂದ ಬಂದಿತು.

ಯಮನೂರಪ್ಪ ಮನೆಗೆ ಬಂದಾಗ ಅವನ ಅವ್ವ ಪಾರಮ್ಮ ಅಂಗಳ ಕಸ ಹೊಡೆದು ಸಗಣಿ ಸಾರಿಸತೊಡಗಿದ್ದಳು. ಇವನನ್ನು ನೋಡಿದವಳೇ ಹರ್ಷಗೊಂಡಳು. 'ಬಾರಪಾ, ಮುಂಜಾನೆದ್ದು ನಿಮ್ಮಪ್ಪ ನಾನು ನಿಂದ ನೆನ್ಪು ಮಾಡಿಕೊಂಡ್ವಿ. ಈ ವಾರ ನೀ ಊರಿಗೆ ಬರಬಹುದು ಅನ್ಕೋತ ಸಾರಿಸಾಕತ್ತಿದ್ದೆ. ನೀ ಬಂದಿ ನೋಡು...' ಅಂತ ಖುಷಿಯ ಮಾತಾಡಿದಳು.

'ನನಗೂ ಊರಿಗೆ ಬರ್ಬೇಕು ಅನಿಸ್ತು. ಅದ್ಕ ಬಂದೆ. ಈ ಸಲ ಯಾಕಬೇ ತಟಗು ಸೊರಗಿಯಲ...' ಅಂತ ಅನ್ಕೋತ ಮನೆ ಒಳ ನಡೆದ. ಅವರಪ್ಪ ಬಸಪ್ಪ ಅಲ್ಲೇ ಗೋಡೆಗೆ ಆತುಕೊಂಡು ಕುಳಿತು ಚಹಾ ಕುಡಿಯತೊಡಗಿದ್ದ. ಯಮನೂರಪ್ಪನನ್ನು ನೋಡಿದವನೇ, 'ಬಾ ಈಗ ಬಂದೆನು. ಆರಾಮದಿಯಾ...' ಅಂತ ಕಕ್ಕುಲಾತಿ ತೋರಿಸಿದ.

'ಹ್ಞೂಂ ಆರಾಮು. ನೀನು ಹೆಂಗದಿಯಪಾ...' ಅಂತ ವಿಚಾರಿಸುತ್ತಾ ಅಡಿಗೆ ಮನೆಗೆ ಹೋಗಿ ಒಲೆಯಲ್ಲಿ ಬಿಸಿಗೆ ಇಟ್ಟಿದ್ದ ಚಾ ಕಿಟ್ಲಿಯಿಂದ ತಾನೂ ಕಪ್ಪುಬಸಿಗೆ ಹಾಕಿಕೊಂಡು ಚಾ ಕುಡಿಯುತ್ತ ಅಂಗಳಕ್ಕೆ ಬಂದು ಕಟ್ಟೆ ಮ್ಯಾಲೆ ಕುಡಿಯುತ್ತಾ ಕುಳಿತ. ಪಾರಮ್ಮ ಆಗಲೇ ಸಗಣಿಯಿಂದ ಸಾರಿಸುವುದನ್ನು ಮುಗಿಸಿದಳು. ಸಾರಿಸಿದ ಹಸಿ ಸೆಗಣಿಯ ಪರಿಮಳ, ಚಹಾ ಬೈಕ್ ಸವಾರಿಯ ಆಯಾಸವನ್ನು ಇಲ್ಲವಾಗಿಸಿದವು. ಪಾರಮ್ಮ ಅವಲಕ್ಕಿ ಮಾಡಿದಳು. ಮೂವರೂ ಸೇರಿ ಅದೂ ಇದೂ ಮಾತಾಡುತ್ತ ಅವಲಕ್ಕಿ ತಿನ್ನತೊಡಗಿದರು.

'ನಿಮ್ಮ ಅಪ್ಪನ ಮಣಕಾಲು ಬ್ಯಾನಿ ಆಗಿ ಅಡ್ಡಾಡೋದು ಬಿಟ್ಟು ಆಗಲೇ ಯಾಡು ವರ್ಷ ಮೇಲಾತು. ನನಗೂ ವಯಸ್ಸಾತು. ದಿನಾ ಒಲಿ ಮುಂದ ಕುಂತು ಅಡಗಿ ಮಾಡೋದಂದ್ರ ತ್ರಾಸಾಗುತ್ತ. ಒಲಿ ಹಚ್ಚಾಕ ಅಷ್ಟು ದೂರದ ಹಳ್ಳಕ್ಕ ಹೋಗಿ ಜಾಲಿ ಕಟಗಿ ತರೋದು, ಕುಡಿಯಾಕ ಸರಕಾರಿ ನಳದಾಗಿಂದ ನೀರು ತರೋದು, ಮನಿ ಸಾರಿಸೋದು, ಅಡಗಿ ಮಾಡೋದು, ಮುಸರಿ ತಿಕ್ಕೋದು, ಮತ್ತ ನಿಮ್ಮಪ್ಪನ ಕಾಳಜಿ ಮಾಡೋದು... ಎಲ್ಲಾ ಮಾಡೋವಷ್ಟು ತ್ರಾಣ ನನಗೂ ಉಳಿದಿಲ್ಲ. ಈ ವರ್ಷ ಲಗ್ನ ಮಾಡ್ಕೊಂಡು ಬಿಡು. ಸೊಸಿ ಕೈಯ್ಯಾನ ನಾಲ್ಕು ಬಿಸಿ ರೊಟ್ಟಿ ತಿಂದು ತಣ್ಣಗ ಹೋಗಿ ಬಿಡ್ತೀವಿ...' ಎಂದಳು ಪಾರಮ್ಮ.

ಯಮನೂರಪ್ಪನಿಗೆ ಈ ಮಾತುಗಳು ನಿರೀಕ್ಷಿತವೇ. ಅವ್ವನನ್ನು ದಿಟ್ಟಿಸಿ ನೋಡಿದ. ವಯೋಸಹಜ ಬಳಲಿಕೆ ಅವಳ ಮುಖದಲ್ಲಾವರಿಸಿದಂತೆ ಕಂಡಿತು. ಮೊದಲಿಗಿಂತ ಸೋತು ಹೋಗಿದ್ದಾಳೆ. ಹಣೆಯ ಮೇಲೆ ಮುದುರಿದ ನಿರಿಗೆಗಳ ಸಂಖ್ಯೆ ಹೆಚ್ಚಾಗಿದೆ. ಕಣ್ಣಕಾಂತಿ ಕಡಿಮೆಯಾಗಿದೆ. ಕೂದಲುಗಳು ಹೆಚ್ಚೂ ಕಡಿಮೆ ಬಿಳಿಯಾಗಿವೆ. ಅಪ್ಪನಂತೂ ಜೀವ ತಿನ್ನುವ